ಶ್ರೀ ಕೆ. ಬಿ. ಶಾಣಪ್ಪ.—ಸಾಲ್ವಾರ ಗ್ರಾಮಕ್ಕೆ ಸೇರಿದಂತೆ ೮-೧೦ ಹಳ್ಳಿಗಳು ಇದೆ ಅಲ್ಲಿ ದೊಡ್ಡ ದೊಡ್ಡ ಜಮೀನ್ದಾರರು ಇರುವಂತಹ ಪ್ರಾಭಲ್ಯವಾದಂತಹ ಒಂದು ಹಳ್ಳಿ, ಅಲ್ಲಿನವರು ಪೋಲೀಸ್ ಸ್ಟೇಷನ್‌ಗೆ ಬರುವುದಿಲ್ಲ ಒಂದು ವೇಳೆ ಹೋಗಬೇಕಾದರೆ ೨೦-೩೦ ಕಿಲೋ ಮೀಟರ್ ದೂರ ಹೋಗ ಬೇಕಾಗುತ್ತದೆ. ಅಲ್ಲಿಯೇ ಒಂದು ಪೋಲೀಸ್ ಸ್ಟೇಷನ್ ಆದರೆ ಅವರು ಅಲ್ಲಿಗೆ ಹೋಗುತ್ತಾರೆ. At least they will have some sort of protection from oppression. ಆ ದೃಷ್ಟಿಕೋನದಿಂದ ಇದನ್ನು ಕೇಳಿದ್ದೇನೆ. ಕಳೆದ ಅಧಿವೇಶನದಲ್ಲಿ, ೧೯೬೭ರಲ್ಲಿ ಆದಷ್ಟು ಮಟ್ಟಿಗೆ ಈ ಬಗ್ಗೆ ಏನಾದರೂ ಮಾಡೋಣವೆಂದು ಲಿಖಿತ ಉತ್ತರದಲ್ಲಿ ಹೇಳಿದ್ದೀರಿ ದಯವಿಟ್ಟು ಅದನ್ನು ಈಗ ಕಾರ್ಯಗತ ಮಾಡಬೇಕು.

ಶ್ರೀ ಬಿ. ರಾಚಯ್ಯ.—ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಇದಕ್ಕೆ ಸಾಧ್ಯವಾದ ಮಟ್ಟಿಗೆ ಮುಂದಿನ ೮೮-೮೯ ರಲ್ಲಿ ಪೋಲೀಸ್ ಸ್ಟೇಷನ್‌ನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.—ಶಾಣಪ್ಪನವರೇ ದಯವಿಟ್ಟು ಕುಳಿತುಕೊಳ್ಳಿ. ಈಗ ಪ್ರಶ್ನೋತ್ತರ ಮುಗಿದಿದೆ. ನಿಮ್ಮೆಲ್ಲರ ಹಿತದೃಷ್ಟಿಯಿಂದ, ಆಸಕ್ತಿಯ ದೃಷ್ಟಿಯಿಂದ ಪ್ರಶ್ನೆಗಳನ್ನು ಲ್ಯಾಪ್ಸ್ ಮಾಡದೇ ಒಂದೊಂದೇ ಸಪ್ಲಿಮೆಂಟರಿಗೆ ಅವಕಾಶವನ್ನು ಕೊಟ್ಟಿದ್ದೇನೆ. ಅದೇ ರೀತಿ ಬಾಬುರೆಡ್ಡಿ ತುಂಗಳ್‌ರವರಿಗೂ ಒಂದಕ್ಕೆ ಅವಕಾಶ ಕೊಟ್ಟಿದ್ದೇನೆ.

ಕರ್ನಾಟಕ ಮಹಾರಾಷ್ಟ್ರ ಗಡಿ ವಿವಾದ

೧೫೫. (೩೨೦) ಶ್ರೀ ಕೆ. ಹೆಚ್. ಪಾಟೀಲ್ (ಗದಗ),—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯೆಯಿಟ್ಟು ಉತ್ತರಿಸುವರೇ,

ಕರ್ನಾಟಕ ಮಹಾರಾಷ್ಟ್ರ ಗಡಿ ವಿವಾದದ ಬಗ್ಗೆ ಮಹಾರಾಷ್ಟ್ರ ಮುಖ್ಯ ಮಂತ್ರಿಗಳೊಡನೆ ರಾಜ್ಯದ ಮುಖ್ಯ ಮಂತ್ರಿಗಳು ನಡೆಸಿದ ಮಾತುಕತೆಗಳ ಮುಖ್ಯಾಂಶಗಳೇನು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು),—ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳು ದಿನಾಂಕ ೨೯-೯-೮೬ ರಂದು ಮುಂಬಯಿಯಲ್ಲಿ ಭೇಟಿಯಾಗಿ ಸೌಹಾರ್ದ ಯುತವಾಗಿ ಮಾತುಕತೆ ನಡೆಸಿದರು. ಅದರ ಮುಖ್ಯಾಂಶಗಳು ಈ ರೀತಿಯಾಗಿವೆ :

೧. ಮಹಾರಾಷ್ಟ್ರ ಸರಕಾರವು ಗಡಿ ಪ್ರದೇಶಗಳಲ್ಲಿನ ಕನ್ನಡ ಶಾಲೆಗಳಲ್ಲಿ ಎಂಟನೆಯ ತರಗತಿ ವರೆಗೆ ಮರಾಠೀ ಭಾಷೆಯನ್ನು ಕಡ್ಡಾಯವಾಗಿ ಕಲಿಸುವ ಕ್ರಮವನ್ನು ತೆಗೆದುಹಾಕಲು ಏಕಪಕ್ಷೀಯ ವಾಗಿ ನಿರ್ಣಯಿಸಿದ್ದರಿಂದ ಕರ್ನಾಟಕ ಸರಕಾರವೂ ಇದೇ ನೀತಿಯನ್ನು ಅನುಷ್ಠಾನಕ್ಕೆ ತರುವುದೆಂದು ಆ ಸರಕಾರವು ಆಶ ವ್ಯಕ್ತಪಡಿಸಿತು. ಕರ್ನಾಟಕ ಮಹಾರಾಷ್ಟ್ರ ಗಡಿಪ್ರದೇಶದ ಜನರ ಅನುಕೂಲತೆ ಹಾಗೂ ಅಭಿವೃದ್ಧಿಯ ವಿಚಾರದಲ್ಲಿ ಎರಡೂ ಸರಕಾರ ಒಂದೇ ರೀತಿಯ ಕ್ರಮ ತೆಗೆದುಕೊಕ್ಕೆಪ ನೀತಿಯನ್ನು ಒಪ್ಪಿರುವುದರಿಂದ ಆ ಆಧಾರದ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಲಾಯಿತು.

೨. ಎರಡೂ ರಾಜ್ಯದ ಮುಖ್ಯ ಮಂತ್ರಿಗಳು, ಗಡಿ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ತೀವ್ರಗೊಳಿಸಬೇಕು. ಈ ಸಂಬಂಧವಾಗಿ ಗಡಿ ಪ್ರದೇಶಗಳ ಭವಿಷ್ಯದ ಅನಿಶ್ಚಿತತೆಯಿಂದಾಗಿ ಯಾವುದೇ ಸಡಿಲು ಧೋರಣೆ ತಳೆಯಕೂಡದು ಈ ಪ್ರದೇಶಗಳು ಯಾವುದೇ ರಾಜ್ಯಕ್ಕೆ ಅಂತಿಮವಾಗಿ ಸೇರಿದರೂ ಅವು ಭಾರತದ ಭಾಗಗಳಾಗಿ ಉಳಿಯುವುವು, ರಾಷ್ಟ್ರೀಯ ಐಕ್ಯತೆಯ ದೃಷ್ಟಿಯಿಂದಲೂ ಇದು ಮುಖ್ಯ, ಎಂಬ ವಿಚಾರವನ್ನು ಒಪ್ಪಿಕೊಂಡರು.

೩. ಸರಕಾರದಿಂದ ನಡೆಸಲಾಗುವ ತಾಂತ್ರಿಕ, ವೈದ್ಯಕೀಯ ಮತ್ತು ಇಂಜಿನೀಯರಿಂಗ್ ಕಾಲೇಜುಗಳಲ್ಲಿ ಗಡಿ ಪ್ರದೇಶಗಳಲ್ಲಿನ ವಿದ್ಯಾರ್ಥಿಗಳಿಗೆ ಸೀಟು ಕಾದಿರಿಸುವಿಕೆಯ ವಿಷಯದ ಪರಿಶೀಲನೆ ಮಾಡಲಾಗುವುದು, ಗಡಿ ಭಾಗಗಳಲ್ಲಿನ ಜನರಲ್ಲಿ ಸೌಹಾರ್ದತೆ ಮತ್ತು ಅನ್ಯೋನ್ಯತೆಯನ್ನು ಹೆಚ್ಚಿಸಲು ಸರಕಾರೀ ಆದೇಶಗಳನ್ನು ಮಾತೃ ಭಾಷೆಯಲ್ಲಿ ಹೊರಡಿಸುವ ದಿಸೆಯಲ್ಲಿ ದಾಖಲೆ ಹಾಗೂ ನಮೂನೆ ಗಳನ್ನು, ಕನ್ನಡ ಹಾಗೂ ಮರಾಠಿ ಭಾಷೆಯಲ್ಲಿ ಹೊರಡಿಸಲು ಎರಡೂ ಸರಕಾರಗಳು ಈಗಾಗಲೇ ಕ್ರಮ ತೆಗೆದುಕೊಂಡಿದ್ದರೆ, ಇಂತಹ ಕ್ರಮ ತೆಗೆದುಕೊಳ್ಳಬೇಕೆಂದು ಕೂಡ ನಿರ್ಣಯಿಸಲಾಯಿತು.

ಳಿ. ಪ್ರಾಸಂಗಿಕವಾಗಿ ಈರ್ವರೂ ಮುಖ್ಯ ಮಂತ್ರಿಗಳು ವಿಸ್ತೃತವಾಗಿ ಮತ್ತು ಮೂಲ ವಿಷಯವಾದ ಗಡಿ ಪ್ರದೇಶಗಳ ಭವಿಷ್ಯದ ಬಗ್ಗೆ ಚರ್ಚಿಸಿ ಮಾತುಕತೆ ನಡೆದ ವಾತಾವರಣ ಮತ್ತು ಸೌಹಾರ್ದ ಮನೋಭಾವವು ಪರಸ್ಪರರಿಗೆ ಒಪ್ಪಿತವಾಗುವ ಸೂತ್ರವನ್ನು ಕಂಡುಹಿಡಿಯುವಲ್ಲಿ ದಾರಿ ಮಾಡಿಕೊಡುತ್ತವೆ ಎಂದು ಭಾವಿಸಲಾಯಿತು.

ಶ್ರೀ ಕೆ. ಹೆಚ್, ಪಾಟೀಲ್.—ಮಾನ್ಯ ಅಧ್ಯಕ್ಷರೇ, ಒಂದೇ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಏಕೆಂದರೆ ನೀವು ಒಂದೇ ಸಪ್ಲಿಮೆಂಟರಿಗೆ ಅವಕಾಶ ಕೊಟ್ಟಿರುವುದರಿಂದ ಒಂದನ್ನೇ ಕೇಳುತ್ತೇನೆ. ''ಯಾವುದೇ ರಾಜ್ಯಕ್ಕೆ ಯಾವ ಪ್ರದೇಶವಾದರೂ ಅಂತಿಮವಾಗಿ ಸೇರಿದರೂ ಅವು ಭಾರತದ ಭಾಗಗಳಾಗಿ ಉಳಿಯುವುವು'' ಎಂದು ಬರೆದಿದ್ದೀರಿ. ನಿಮ್ಮ ಮಾತುಕತೆಯ ಸಾರಾಂಶದಲ್ಲಿ ಹಾಕಿದ್ದೀರಿ, ತಾವು ಅಡ್ಜಸ್ಟ್‌ಮೆಂಟ್ ಸಲುವಾಗಿ ಮಾತನಾಡಿದ್ದೀರೋ ಅಥವಾ ಲಾಂಗ್‌ವೇಜಸ್ ಸಲುವಾಗಿ ಅಷ್ಟೇ ಮಾತನಾಡಿದ್ದೀರೋ ಮತ್ತು ಡೆವೆಲಪ್‌ಮೆಂಟ್ ವಿಷಯವಾಗಿ ಮಾತನಾಡಿದ್ದಿರೊ ಯಾವಯಾವ ಪಡೆಲಪ್‌ಮಂಚ್‌ನಲ್ಲಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ತಾವು ರೂಪರೇಷೆಗಳನ್ನು ಮಾಡಿಕೊಂಡಿದ್ದೀರಿ. ಮತ್ತೆ ಇದರಲ್ಲಿ ಪಕ್ಕದಲ್ಲಿ ಯಾವ ಪ್ರದೇಶಗಳು ಸೇರಿದರೂ ಸಹಿತ ಭಾರತದ ಅಂಗವಾಗಿ ಉಳಿಯುವುವು ಎಂದು ಮಹಾಜನ್ ವರದಿಯನ್ನು ಮಿಸಾರಿ ಯಾವುದಾದರೂ ರೀತಿಯ ವಿಶೇಷವಾದ ಹೊಂದಾಣಿಕೆಯನ್ನು ಮಾಡಲಿಕ್ಕೆ ತಾವಾಗಲೀ ಅಥವಾ ಅವರಾಗಲೀ ಪ್ರಯತ್ನ ಮಾಡಿದ್ದೀರಾ ? ನನಗೆ ಗೊತ್ತಿದೆ, ರಾಜ್ಯದ ಹಿತವನ್ನು ತಾವು ಕಾಪಾಡುತ್ತೀರಿ ಎಂದು. ಏನಾದರೂ ಆ ತರಹದ ಸಲಹೆಗಳು ಬಂದರೆ ಏನು ಮಾಡುತ್ತೀರಿ ಎಂದು ಕನ್ನಡ ನಾಡಿನ ಜನತೆಯ ಬಗ್ಗೆ ಈ ಪ್ರಶ್ನೆಯನ್ನು ತಮ್ಮಲ್ಲಿ ಕೇಳಬಯಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಮಹಾಜನ್ ವರದಿಯ ಚೌಕಟ್ಟಿನ ಮುಖಾಂತರ ಯಾವುದೇರೀತಿಯ ಹೊಂದಾಣಿಕೆಗೆ ನಾವು ಸಿದ್ಧರಿಲ್ಲ. ಅದನ್ನು ನಾವು ಸ್ಪಷ್ಟಪಡಿಸಿದ್ದೇವೆ. ಈಗ ಈ ಒಂದು ವಾಕ್ಯವನ್ನು ಹಾಕತಕ್ಕಂಥ ಅಪಶ್ಯಕತೆ ಏನು ಬಂತು ಎಂದರೆ ಮಹಾಜನ್ ವರದಿಯನ್ನು ಒಪ್ಪಿಕೊಂಡರೂ ಒಪ್ಪಿಕೊಳ್ಳುವವರೆಗೆ ಕೆಲವು ಭಾಗಗಳು ಮರಾಠಿ ಮಾತನಾಡತಕ್ಕಂಥ ಜನರು ಬಹು ಸಂಖ್ಯೆಯಲ್ಲಿ ಇರತಕ್ಕಂಥ ಭಾಗಗಳು ನಮ್ಮಲ್ಲಿವೆ, ಅದೇ ರೀತಿ ಕನ್ನಡ ಮಾತನಾಡತಕ್ಕಂಥ ಜನರು ಬಹುಸಂಖ್ಯೆಯಲ್ಲಿ ಇರತಕ್ಕಂಥ ಭಾಗಗಳು ಅಲ್ಲಿವೆ. ಆ ಭಾಗದ ಅಭಿವೃದ್ಧಿ ನಿಂತುಹೋಗುತ್ತದೆ. ಇವೊತ್ತಲ್ಲ ನಾಳೆ ಅಥವಾ ನಾಡಿದ್ದು ಆಗಲಿ, ಯಾವಾಗ ಆಗಲಿ ಕೆಲವು ಭಾಗಗಳು ಆ ಕಡೆಯಿಂದ ಇಲ್ಲಿಗೆ ಬರುವುದು ಇದೆ, ಕೆಲವು ಭಾಗಗಳು ಈ ಕಡೆಯಿಂದ ಆ ಕಡೆಗೆ ಹೋಗುವುದು ಇದೆ. ಆ ಪ್ರದೇಶಗಳು ಎಲ್ಲಿಗೇ ಹೋಗಲಿ ಭಾರತ ಬಿಟ್ಟು ಹೋಗುವುದಿಲ್ಲ. ಆ ಜನರಿಗೆ ತೊಂದರೆ ಆಗದೇ ಇರುವ ರೀತಿಯಲ್ಲಿ ಅಭಿವೃದ್ಧಿ ಕೆಲಸಗಳನ್ನು ತೆಗೆದು ಕೊಂಡು ಮಾಡಬೇಕು ಎಂದು ನಾವು ಒಪ್ಪಿಕೊಂಡಿದ್ದೇವೆ. ಈ ಮಾತು ಆ ಜನರಿಗೆ ಅಭಿವೃದ್ಧಿ ಕೆಲಸಗಳು ಆಗಲಿ ಎನ್ನುವ ಉದ್ದೇಶದಿಂದ. ಅದು ಯಾವ ಕೆಲಸವೇ ಆಗಲಿ ಅದು ರಸ್ತೆ ಕೆಲಸವಾಗಬಹುದು ಚಿಕ್ಕ ನೀರಾವರಿ ಕೆಲಸವೇ ಆಗಬಹುದು, ಶಾಲೆಯೇ ಆಗಬಹುದು, ಎಲೆಕ್ಟ್ರಿಫಿಟಿಯೇ ಆಗಬಹುದು, ಈ ಎಲ್ಲಾ ವಿಚಾರದಲ್ಲೂ ಸರಿಯಾಗಿ ನೋಡಿಕೊಳ್ಳುವುದಕ್ಕೆ ಎರಡೂ ಭಾಗದಲ್ಲಿರುವ ಉನ್ನತ ಅಧಿಕಾರಿಗಳನ್ನು ನಮ್ಮ ಸರ್ಕಾರ ಮತ್ತು ಆ ಸರ್ಕಾರ ಇಬ್ಬರೂ ಸೇರಿ ನೇಮಕ ಮಾಡಿರುವ ಉದ್ದೇಶ. ಅವರು ಆಗಾಗ್ಗೆ ಆ ಪ್ರದೇಶಗಳಲ್ಲಿ ಸಂಚಾರ ಮಾಡಿ ಅಲ್ಲಿ ಜನರಿಂದ ಏನು ದೂರು ಬರುತ್ತದೆ, ಮತ್ತು ಆ ಜನರಿಗೆ ಏನಾದರೂ ತೊಂದರೆ ಇದ್ದರೆ ಅವರು ಅದನ್ನು ತಿಳಿದುಕೊಂಡು ಆ ಅಧಿಕಾರಿಗಳ ಗಮನಕ್ಕೆ ತರುತ್ತಾರೆ. ಹಾಗೆಯೇ ನಮ್ಮ ಅಧಿಕಾರಿಗಳೂ ಸಹ ಈ ಸರ್ಕಾರದ ಗಮನಕ್ಕೆ ತರುತ್ತಾರೆ. ನಾವುಗಳು ಈ ಒಂದು ತತ್ವವನ್ನು ಒಪ್ಪಿಕೊಂಡಿದ್ದೇವೆ. ಈ ತತ್ವವನ್ನು ಮುಖ್ಯಮಂತ್ರಿಗಳ ಸಮೀಳನದಲ್ಲಿ ನಡೆದಂಥ ತುರ್ತು ಸಭೆಯಲ್ಲಿ ಹಾಗೂ ಯಾವುದೇ ಅಲ್ಪಸಂಖ್ಯಾತರು ಇರಲಿ, ನಮ್ಮ ಭಾಗದಲ್ಲಿ ಮರಾಠಿ ಮಾತನಾಡತಕ್ಕಂಥ ಅಲ್ಪ ಸಂಖ್ಯಾತರು ಇರಲಿ, ಅಥವಾ ಅವರ ಭಾಗದಲ್ಲಿ ಕನ್ನಡ ಮಾತನಾಡತಕ್ಕಂಥ ಅಲ್ಪ ಸಂಖ್ಯಾತರು ಇರಲಿ ಯಾರಿಗೂ ಕೂಡ ಯಾವ ಪಕ್ಷಪಾತ ಮಾಡಕೂಡದು ಎಂದು ನ್ಯಾಷನಲ್ ಇಂಟಗ್ರೇಷನ್ ಕೌನ್ಸಿಲ್‌ನಲ್ಲಿ, ಒಪ್ಪಿಕೊಂಡಿದ್ದೇವೆ. ಅವರಿಗೆ ಆ ಭಾಷೆಯ ಮೂಲಕ ಶಿಕ್ಷಣ ವ್ಯವಸ್ಥೆಯಾಗಬೇಕು, ಇನ್ನೂ ಯಾವ ಯಾವ ವ್ಯವಸ್ಥೆ ಆಗಬೇಕು, ಅವರು ಆ ವ್ಯವಸ್ಥೆಯನ್ನು ಎಷ್ಟರ ಮಟ್ಟಿಗೆ ಮಾಡುತ್ತಾರೋ ಅಷ್ಟೇ ನಾವೂ ಕೂಡ ಮಾಡಬೇಕಾಗುತ್ತದೆ. ನಾನು ಮೊದಲು ಹೇಳಿದಂತೆ ಆ ಒಂದು ಆಧಾರದ ಮೇಲೆ ಏನು ಮಾಡುತ್ತಾರೋ ಅದರಂತೆ ನಾವೂ ಮಾಡುತ್ತೇವೆ ಎನ್ನುವುದನ್ನು ಒಪ್ಪಿಕೊಂಡಿದ್ದೇವೆ.